೧೦ ಸರ್ಕಾರಿ ನೌಕರರ ಸಂಬಳದಿಂದ ಶೇಕಡಾ 10 ಭಾಗವನ್ನು ಅಭಿವೃದ್ಧಿ ಕಾರ್ಯಗಳಿಗೆ ಕಾಣಿಕೆ ರೂಪದಲ್ಲಿ ವಸೂಲಿ ಮಾಡುವ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ನೌಕರರ ತಿಂಗಳ ಸಂಬಳದಲ್ಲಿ ಶೇಕಡ ೧೦ ಭಾಗವನ್ನು ಸರಕಾರದ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಬರಗಾಲದ ಅಭಿವೃದ್ಧಿ ಕಾರ್ಯಗಳಿಗೂ ಹಾಗೂ ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲಕ್ಕೆ ತುತ್ತಾಗಿರುವ ರೈತರಿಗಾಗಿ ಸರಕಾರಿ ನೌಕರರ ಕಾಣಿಕೆಯಾಗಿ ಕೊಡುಗೆ ಕೊಡುವುದರ ಮೂಲಕ ರಾಜ್ಯದಲ್ಲಿ ಸ್ಥಗಿತ ವಾಗಿರುವ ರೈತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನೆರವಾಗುವಂತೆ ಸರಕಾರದವರು ಕಾನೂನು ಜಾರಿಗೆ ತರಬೇಕಾಗಿಯೂ ಮತ್ತು ನೌಕರರು ಇದರ ಬಗ್ಗೆ ಮುಂದೆ ಬರಬೇಕಾಗಿಯೂ ಸದನದ ಮೂಲಕ ಸರ್ಕಾರದವರ ಗಮನ ಸೆಳೆಯುತ್ತಾ ಇದ್ದೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆಂದು ಹೇಳುತ್ತಾ ಇದ್ದೇನೆ.

೧೧ ಚಿಕ್ಕನಾಯಕನಹಳ್ಳಿ ಹುಳಿಯಾರು ನಗರ ಪಂಚಾಯ್ತಿಯ ಅಂಗಡಿಗಳನ್ನು ಹರಾಜು ಮಾಡುವ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ನಗರ ಪಂಚಾಯ್ತಿಗೆ ಸೇರಿದ ಇಪ್ಪತ್ತೆರಡು ಅಂಗಡಿ ಮಳಿಗೆಗಳು ಇದ್ದು ಅವುಗಳನ್ನು ಈಗ್ಗೆ ಐದು ವರ್ಷಗಳ ಕೆಳಗೆ ನಗರ ಪಂಚಾಯ್ತಿಯವರು ಒಂದು ಅಂಗಡಿಗೆ ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಮತ್ತು ತಿಂಗಳು ಒಂದಕ್ಕೆ ೫೦-೦೦ ರೂಪಾಯಿ ಬಾಡಿಗೆ ಮತ್ತು ಐದು ವರ್ಷದ ನಂತರ ಆ ಅಂಗಡಿಗಳನ್ನು ಖಾಲಿಮಾಡಿ ಪಂಚಾಯ್ತಿಗೆ ಬಿಟ್ಟುಕೊಡಬೇಕೆಂಬ ಷರತ್ತಿನ ಮೇರೆಗೆ ಪಂಚಾಯ್ತಿಗೆ ಛಾಪಾ ಕಾಗದದಲ್ಲಿ ಬರೆದುಕೊಟ್ಟಿರುತ್ತಾರೆ. ಕಳೆದ ೧೯೮೬ನೇ ಜನವರಿ ೩೧ಕ್ಕೆ ೫ ವರ್ಷ ಮುಗಿದು ಅಂಗಡಿಗಳನ್ನು ಪಂಚಾಯ್ತಿಗೆ ಬಿಟ್ಟುಕೊಡಬೇಕು. ಆದ್ದರಿಂದ ಸದರಿ ಅಂಗಡಿಗಳನ್ನು ಪುನಃ ಹರಾಜು ಮಾಡುವಂತೆ ತುಮಕೂರು ಜಿಲ್ಲಾಧಿಕಾರಿಗಳು ಚಿಕ್ಕನಾಯಕನಹಳ್ಳಿ ಬಿ. ಡಿ. ಓ. ರವರಿಗೆ ಪತ್ರದ ಮೂಲಕ ಆದೇಶ ಕೊಟ್ಟಿರುರು. ಇದರ ಮೇಲೆ ಫೆಬ್ರವರಿ ೨೬ ರಂದು ಮಳಿಗೆಗಳನ್ನು ಬಹಿರಂಗ ಬಾಡಿಗೆ ಹರಾಜು ಹಾಕುವುದಾಗಿ ಬಿ. ಡಿ. ಓ. ಹುಳಿಯಾರ್ ಟೌನ್‌ನಲ್ಲಿ ಟಾಂ ಟಾಂ ಮೂಲಕ ತಿಳುವಳಿಕೆ ಕೊಟ್ಟರು. ಈಗ ತಿಂಗಳಿಗೆ ೨೫೦-೦೦ ರೂಪಾಯಿಗಿಂತ ಹೆಚ್ಚು ಬಾಡಿಗೆಗೆ ಅಂಗಡಿಗಳು ಹರಾಜಿನಲ್ಲಿ ಹೋಗುತ್ತವೆ. ಆದರೆ ಈಗ ಹಾಲಿ ಅಂಗಡಿ ಹಿಡಿದಿರುವವರಿಗೆ ಕಡಿಮೆ ಮಾಡಿದಂತಾಗುತ್ತದೆ. ಆದ್ದರಿಂದ ಯಾವುದೇ ಒತ್ತಡಕ್ಕೆ ಮಣಿಯದೇ ನಗರ ಪಂಚಾಯ್ತಿಗೆ ಹೆಚ್ಚು ಲಾಭ ಮಾಡುವ ದೃಷ್ಟಿ ಯಿಂದ ತಕ್ಷಣ ಬಹಿರಂಗ ಹರಾಜು ಮೂಲಕ ಅಂಗಡಿ ಮಳಿಗೆಗಳನ್ನು ಕೊಡಬೇಕಾಗಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.— ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ನಗರ ಪಂಚಾಯಿತಿಗೆ ಸೇರಿದ ೨೨ ಅಂಗಡಿ ಮಳಿಗೆಗಳ ಬಗ್ಗೆ ಈಗ ಇರುವ ಬಾಡಿಗೆದಾರರಿಂದ ಬಹಳಷ್ಟು ಒತ್ತಾಯಗಳು ತಮಗೇ ನೀಡಬೇಕೆಂದು ಸರ್ಕಾರಕ್ಕೆ ಬಂದಿರುವುದರಿಂದ, ಸರ್ಕಾರದವರು ಪರಿಶೀಲಿಸಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ರಚನೆಯಾಗುತ್ತಿರುವುದರಿಂದ ಈ ಮಳಿಗೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಮಟ್ಟಿಗೆ ಹರಾಜು ಮೂಲಕ ವಿಲೇವಾರಿ ಮಾಡಲು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ತಿಪಟೂರು ಉಪ ವಿಭಾಗಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಆದೇಶ ನೀಡಿರುತ್ತಾರೆ.